2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ ದಾವಣಗೆರೆ .

S.C. No.43/2018

ದೋ.ಸಾ. 23
ಫ್ರಾ.ಸಾ. 4
ಪ್ರ.ವ.ಬೊ.ದಿನಾಂಕ. 26-03-2024

| | | |
|---|---|---|
| ಹೆಸರು ಶ್ರೀ/ ಶ್ರೀ ಮತಿ. | - | ಚನ್ನಬಸಮ್ಮ |
| ತಂದೆ / ಗಂಡನ ಹೆಸರು | - | ನಂಜೇಶಪ್ಪ |
| ವಯಸ್ಸು | - | 54 |
| ಉದ್ಯೋಗ | - | ವ್ಯವಸಾಯ |
| ವಾಸ ಸ್ಥಳ | - | ಮೆಳ್ಳೆಕಟ್ಟೆ ಗ್ರಾಮ |

ಮುಖ್ಯ ವಿಚಾರಣೆಃ - ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ಚಾ.ಸಾ.11 ನನ್ನ ಮಾವ. ಚಾ.ಸಾ.16 ನನ್ನ ಗಂಡ. ಅವರು ಈ ಹಂತದಲ್ಲಿ ತೀರಿಕೊಂಡಿರುತ್ತಾರೆ. ಚಾ.ಸಾ.22 ಮತ್ತು 25 ರವರು ನನ್ನ ಮೈದುನರು. ನನಗೆ ಚಾ.ಸಾ.17, 18 ಮತ್ತು 26 ರವರ ಪರಿಚಯ ಇರುತ್ತದೆ. ಫ್ರಾ.ಸಾ.3 ನನ್ನ ಮಗ. ನನಗೆ ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪರಿಚಯ ಇರುತ್ತದೆ. ಅವರಲ್ಲಿ 1 ನೇ ಆರೋಪಿತನು ನನ್ನ ಮಗಳಾದ ಕುಸುಮ ಈಕೆಯ ಗಂಡ. ಉಳಿದವರು ನನ್ನ ಮಗಳ ಮಾವ ಮತ್ತು ಅತ್ತೆ ಆಗಿರುತ್ತಾರೆ.

ಕಳೆದ ಹತ್ತು ವರ್ಷದ ಹಿಂದೆ ನನ್ನ ಮಗಳ ಮದುವೆಯನ್ನು 1 ನೇ ಆರೋಪಿಯ ಜೊತೆ ಮಾಡಲಾಗಿದ್ದು, ಆ ಸಮಯದಲ್ಲಿ 30 ತೊಲ ಬಂಗಾರ, 2 ವರೆ ಲಕ್ಷ ರೂಪಾಯಿ ಹಣ, ಬೈಕಿಗೆ 60 ಸಾವಿರ ರೂಪಾಯಿ ಹಣ ಹಾಗೂ ಮದುವೆಯ ಖರ್ಚನ್ನು ಹಾಕಿಕೊಂಡು ಮದುವೆ ಮಾಡಿಕೊಟ್ಟಿರುತ್ತೇವೆ. ಅಲ್ಲದೇ ಮದುವೆ ಸಮಯದಲ್ಲಿ ಬಾಂಡೆ ಸಾಮಾನನ್ನು ಕೂಡ ನೀಡಿರುತ್ತೇವೆ. ಅವರ ಮದುವೆಯು ದಾವಣಗೆರೆಯಲ್ಲಿ ಇರುವ ಮೋತಿ ಚನ್ನಬಸಮ್ಮ ವೀರಪ್ಪ ಕಲ್ಯಾಣ ಮಂಟಪದಲ್ಲಿ ಆಗಿರುತ್ತದೆ.

ನನ್ನ ಮಗಳು ಮದುವೆಯಾದ ಬಳಿಕ ತನ್ನ ಗಂಡನ ಮನೆಗೆ ಹೋಗಿ ವಾಸ ಮಾಡಿದ್ದು, ಅಲ್ಲಿ ಆರೋಪಿತರು ಹಾಗೂ 1 ನೇ ಆರೋಪಿಯ ಅಜ್ಜಿಯ ಜೊತೆ ಆಕೆ ವಾಸವಾಗಿದ್ದಳು. ನನ್ನ ಮಗಳಿಗೆ ಒಂದು ಮಗುವಾಗುವವರೆಗೆ ಅವಳನ್ನು ಆರೋಪಿತರು ಚೆನ್ನಾಗಿ ನೋಡಿಕೊಂಡಿರುತ್ತಾರೆ. ನನ್ನ ಮಗಳ ಹೆರಿಗೆಯು ದಾವಣಗೆರೆಯ ಬಾಪೂಜಿ ಆಸ್ಪತ್ರೆಯಲ್ಲಿ ಆಗಿರುತ್ತದೆ. ನಂತರ ತೊಟ್ಟಿಲು ಶಾಸ್ತ್ರ ಮುಗಿದ ಬಳಿಕ ನನ್ನ ಮಗಳನ್ನು ಅವಳ ಮಗುವಿನೊಂದಿಗೆ ಗಂಡನ ಮನೆಗೆ ಕಳುಹಿಸಿಕೊಟ್ಟಿರುತ್ತೇವೆ.

ನಂತರ ಸ್ವಲ್ಪ ದಿನಗಳ ಕಾಲ ಆರೋಪಿತರು ಆಕೆಯನ್ನು ಚೆನ್ನಾಗಿ ನೋಡಿಕೊಂಡಿದ್ದು, ನಂತರ ಆಕೆಗೆ ವರದಕ್ಷಿಣೆ ಹಣ ತರಬೇಕು ಎಂದು ಹೊಡೆ ಬಡೆ ಮಾಡಿ ನಮ್ಮ ಮನೆಗೆ ಕಳುಹಿಸಿಕೊಟ್ಟಿರುತ್ತಾರೆ. ನಂತರ ನನ್ನ ಮಾವ ಹಾಗೂ ಮೈದುನರು ನನ್ನ ಮಗಳನ್ನು ಕರೆದುಕೊಂಡು ಆರೋಪಿತರ ಮನೆಗೆ ಹೋಗಿ ಅಲ್ಲಿ ಆಕೆಗೂ ಹಾಗೂ ಆರೋಪಿತರಿಗೂ ಬುದ್ದಿವಾದ ಹೇಳಿ ಅಲ್ಲಿಯೇ ಆಕೆಯನ್ನು ಬಿಟ್ಟು ಬಂದಿರುತ್ತಾರೆ. ನಂತರ ಸ್ವಲ್ಪ ದಿನಗಳ ಕಾಲ ಆಕೆಯನ್ನು ಚೆನ್ನಾಗಿ ನೋಡಿಕೊಳ್ಳಲಾಗಿದ್ದು, ನಂತರ ಪುನಃ ಆಕೆಗೆ ಹೊಡೆದು ನಮ್ಮ ಮನೆಗೆ ವಾಪಾಸು ಕಳುಹಿಸಿಕೊಟ್ಟಿದ್ದು, ನಂತರ ಪುನಃ ನಮ್ಮ ಸಂಬಂಧಿಕರು ಅವಳನ್ನು ಗಂಡನ ಮನೆಗೆ ಕರೆದುಕೊಂಡು ಹೋಗಿ ಬಿಟ್ಟು ಬಂದಿರುತ್ತಾರೆ. ಈ ರೀತಿಯಾಗಿ ಮೂರ್ನಾಲ್ಕು ಬಾರಿ ಆರೋಪಿತರು ನನ್ನ ಮಗಳಿಗೆ ಹೊಡೆದು ನಮ್ಮ ಮನೆಗೆ

ಕಳುಹಿಸಿಕೊಟ್ಟಿದ್ದು, ನಂತರ ನಮ್ಮ ಸಂಬಂಧಿಕರು ಆರೋಪಿತರ ಮನೆಗೆ ಹೋಗಿ ಪಂಚಾಯಿತಿ ಮಾಡಿ ಅವಳನ್ನು ಅಲ್ಲಿ ಬಿಟ್ಟು ಬಂದಿರುತ್ತಾರೆ.

ನಂತರ ನನ್ನ ಮಗಳು ತೀರಿಹೋದ ದಿನ 1 ನೇ ಆರೋಪಿತನು ನಮಗೆ ದೂರವಾಣಿ ಮಾಡಿ ನನ್ನ ಮಗಳು ತೀರಿಕೊಂಡಿರುತ್ತಾಳೆ ಎಂದು ವಿಷಯ ತಿಳಿಸಿರುತ್ತಾನೆ. ನಂತರ ನಾವೆಲ್ಲರೂ ಆರೋಪಿತರ ಮನೆಗೆ ಹೋಗಿದ್ದು, ಅಲ್ಲಿ ಆರೋಪಿತರು ಇರಲಿಲ್ಲ. ನಂತರ ನಾವು ನಮ್ಮ ಮಗಳ ಶವವನ್ನು ನೋಡಿದಾಗ ಆಕೆಯ ಎಡಕಿವಿಯಲ್ಲಿ ರಕ್ತ ಬರುತ್ತಿತ್ತು. ಅಲ್ಲದೇ ಆಕೆಯ ಬಲಕಾಲಿನ ಮೇಲೆ ತರಚಿದ ಗಾಯಗಳಿದ್ದವು ಹಾಗೂ ಆಕೆಯ ಕುತ್ತಿಗೆಯ ಸುತ್ತ ಸೀರೆಯಿಂದ ಬಿಗಿದ ಗುರುತು ಇದ್ದವು. ನಂತರ ನಾನು ಮತ್ತು ನನ್ನ ಮಗ ಠಾಣೆಗೆ ಹೋಗಿ ದೂರನ್ನು ಸಲ್ಲಿಸಿದ್ದು, ಬಳಿಕ ಪೋಲೀಸರು ಆರೋಪಿತರ ಮನೆಗೆ ಬಂದು ನನ್ನ ಮಗಳ ಶವವನ್ನು ಬಾಪೂಜಿ ಆಸ್ಪತ್ರೆಗೆ ತೆಗೆದುಕೊಂಡು ಹೋಗಿರುತ್ತಾರೆ. ನಾನು ಮತ್ತು ನನ್ನ ಮಗ ನೀಡಿದ ದೂರನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ದೂರನ್ನು ಚಾ.ಸಾ.27 ರೇವಣಸಿದ್ದಪ್ಪ ಎನ್ನುವವರು ಬರೆದಿರುತ್ತಾರೆ. ಅದು ಈಗಾಗಲೇ ನಿ.ಪಿ.7 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.7(ಬಿ) ಎಂದು ಈಗಾಗಲೇ ಗುರುತಿಸಲಾಗಿರುತ್ತದೆ.

ನಂತರ ಮರುದಿನ ತಹಶೀಲ್ದಾರರು ಆಸ್ಪತ್ರೆಯ ಬಳಿ ಬಂದು ಪಂಚನಾಮೆಯನ್ನು ಬರೆದಿರುತ್ತಾರೆ. ಆ ಸಮಯದಲ್ಲಿ ಚಾ.ಸಾ.8, 9 ಹಾಗೂ ಇತರ ಸಂಬಂಧಿಕರು ಹಾಜರಿದ್ದರು. ಶವ ತನಿಖೆಯ ಸಮಯದಲ್ಲಿಯೂ ಶವವನ್ನು ಪರೀಕ್ಷಿಸಿದ್ದು, ಆ ಸಮಯದಲ್ಲಿ ಆಕೆಯ ಎಡಕಿವಿಯಲ್ಲಿ ರಕ್ತ ಬಂದಿರುವುದು, ಬಲಕಾಲಿನಲ್ಲಿ ತರಚಿದ ಗಾಯ ಇರುವುದು ಹಾಗೂ ಕುತ್ತಿಗೆಯ ಬಳಿ ಸೀರೆ ಸುತ್ತಿದ ಗುರುತು ಇರುವುದು ಕಂಡುಬಂದಿರುತ್ತದೆ. ಅವುಗಳನ್ನು ನೋಡಿದಾಗ ಆರೋಪಿತರೇ ನನ್ನ ಮಗಳನ್ನು ಹೊಡೆದು ಹಾಕಿದ್ದಾರೆ ಎಂದು ಕಂಡುಬಂದಿರುತ್ತದೆ. ಆ ಸಮಯದಲ್ಲಿ ನಾನು ತಹಶೀಲ್ದಾರರಿಗೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ.

ನಾನು ನನ್ನ ಮಗಳ ಮದುವೆಯ ಸಮಯದಲ್ಲಿ ಬರೆಯಿಸಲಾಗಿದ್ದ ಮದುವೆಯ ಕರೆಯೋಲೆ ಹಾಗೂ ಮದುವೆಯ ಸಮಯದಲ್ಲಿ ತೆಗೆಯಲಾದ ಪೋಟೋಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳು ಈಗಾಗಲೇ ನಿ.ಪಿ.9 ರಿಂದ 11 ಎಂದು ಗುರುತಿಸಲಾಗಿದ್ದು, ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿರುತ್ತಾರೆ. ನನ್ನ ಮಗಳು ಮದುವೆಯಾದ ಮೂರುವರೆ ವರ್ಷಗಳಲ್ಲಿ ಆರೋಪಿತರ ಮನೆಯಲ್ಲಿ ತೀರಿಕೊಂಡಿರುತ್ತಾಳೆ. ನನ್ನ ಮಗಳಿಗೆ ವರದಕ್ಷಿಣೆ ಹಣ ತೆಗೆದುಕೊಂಡು ಬಾ ಎಂದು ಹೇಳಿ ಆರೋಪಿತರೇ ಆಕೆಯನ್ನು ಹೊಡೆದು ಹಾಕಿರುತ್ತಾರೆ. ಈ ಕುರಿತು ನಾನು ಪೋಲೀಸರಿಗೆ ಹೇಳಿಕೆಯನ್ನು ಕೂಡ ನೀಡಿರುತ್ತೇನೆ.

ನಾನು ನನ್ನ ಮಗಳಿಗೆ ಮದುವೆಯ ಸಮಯದಲ್ಲಿ ಹಾಕಿಕೊಟ್ಟಂತಹ ಬಂಗಾರದ ಒಡವೆಗಳು, ಬಟ್ಟೆ ಹಾಗೂ ಇತರ ಸಾಮಾನುಗಳನ್ನು ನೋಡಿದರೆ ಗುರುತಿಸುತ್ತೇನೆ.

( ಈ ಹಂತದಲ್ಲಿ ವಸ್ತುಗಳು ನ್ಯಾಯಾಲಯದ ಮುಂದೆ ಇಲ್ಲದೇ ಇರುವ ಕಾರಣ ಮುಂದಿನ ವಿಚಾರಣೆಗಾಗಿ ಪ್ರಕರಣವನ್ನು ಮುಂದೂಡಲಾಗಿರುತ್ತದೆ.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.